

ಎಷ್ಟು ಸರಿ? ಸಮಸ್ಯೆ ಇದೆ ಎಂದಾಗ, ಆ ಸಮಸ್ಯೆಯನ್ನು ಒಪ್ಪಿಕೊಂಡು ಮುಂದೆ ಅದು ಆಗದಂತೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಯಾಕೆ ಹೇಳುತ್ತಿಲ್ಲ?

ಚಲನಚಿತ್ರ ವಾಣಿಜ್ಯ ಮಂಡಳಿ ನಡೆಸಿದ ಸಭೆಯಲ್ಲಿಯೂ ನನ್ನ ಬಾಯಿ ಮುಚ್ಚಿಸುವ ಪ್ರಯತ್ನ ಮಾಡಿದರು. ನನ್ನ ಅನುಭವವನ್ನೇ ವಿವರಿಸಿದಾಗ, ಅದರಲ್ಲಿ ಅರ್ಥ ಇದೆ ಎಂದು ಮಾತನಾಡಲು ಬಿಟ್ಟರು.

ನನಗೆ ಕಾಸ್ಟಿಂಗ್ ಕೌಚ್ ಆಗಿಲ್ಲ. ನನ್ನ ತಾಯಿ ಜೊತೆಯಿದ್ದು, ನನಗೆ ರಕ್ಷಣೆ ನೀಡಿದ್ದಾರೆ. ಆದರೆ ಪ್ರತಿ ಹುಡುಗಿಯ ಪರಿಸ್ಥಿತಿಯೂ ಹಾಗಿರುವುದಿಲ್ಲವಲ್ಲ. ನನಗೆ ಇದ್ದಷ್ಟು ಭದ್ರತೆ ಎಲ್ಲರಿಗೂ ಇರುತ್ತೆ ಎಂದು ಹೇಳಲು ಸಾಧ್ಯವಿಲ್ಲ. ನಾವು ಸಿನಿಮಾರಂಗವನ್ನು ದೂಷಿಸುತ್ತಿಲ್ಲ, ಆದರೆ ಎಲ್ಲರಿಗೂ ಸುರಕ್ಷತೆ ಸಿಗಲಿ ಎಂಬ ಉದ್ದೇಶವಷ್ಟೆ ನಮ್ಮದು.

'ಐವತ್ತು ವರ್ಷಗಳಿಂದ ಕೆಲಸ ಮಾಡುತ್ತಿದ್ದೇವೆ. ನಮಗೆ ಅಂಥ ಅನುಭವ ಆಗಿಲ್ಲ' ಎಂದು ಕೆಲವು ಹಿರಿಯರು ಹೇಳಿದರು. ತುಂಬಾ ಸಂತೋಷ. ಆದರೆ, ನಿಮಗೆ ಅನುಭವವಾಗಿಲ್ಲ ಎಂದರೆ, ಬೇರೆಯವರಿಗೂ ಆಗಬಾರದು ಎಂದಿಲ್ಲವಲ್ಲ? ನಮ್ಮ ಹಕ್ಕುಗಳನ್ನು ಕೇಳುವುದರಿಂದ ಸಿನಿಮಾರಂಗ ಮುಚ್ಚಿಹೋಗುತ್ತದೆ ಎಂಬ ವಾದದಲ್ಲೇ ಅರ್ಥವಿಲ್ಲ.

ಲೈಂಗಿಕ ದೌರ್ಜನ್ಯ ಮಾತ್ರ ಇಲ್ಲಿ ವಿಷಯವಲ್ಲ. ಸಂಭಾವನೆ ವಿಷಯದಲ್ಲಿಯೂ ತುಂಬಾ ವ್ಯತ್ಯಾಸವಿದೆ. ನಟನಿಗೆ ಕೊಡುವಷ್ಟೇ ಸಂಭಾವನೆ ನಟಿಗೂ ಕೊಡಬೇಕು ಎಂದು ಹೇಳುತ್ತಿಲ್ಲ. ಸಂಭಾವನೆಯಲ್ಲಿ ತೀರಾ ವ್ಯತ್ಯಾಸ ಯಾಕೆ ಎಂಬುದು ನನ್ನ ಪ್ರಶ್ನೆ. ಹೀರೊಗೆ ಸ್ವಲ್ಪವೂ ತೊಂದರೆಯಾಗದಂತೆ ನೋಡಿಕೊಳ್ಳುತ್ತಾರೆ. ಅದು ಖುಷಿ ವಿಚಾರವೇ. ನಮ್ಮನ್ನು ಕಡೆಗಣಿಸಬೇಡಿ ಎಂಬುದಷ್ಟೆ ನಮ್ಮ ಮನವಿ. ಹಿರಿಯ ನಟಿಯೊಬ್ಬರು 'ಹೀರೊಯಿನ್‌ಗಳಿಗೆ ಎಷ್ಟು ಖರ್ಚು ಮಾಡುತ್ತಾರೆ ಗೊತ್ತಾ' ಎಂದು ನಮ್ಮನ್ನೇ ಪ್ರಶ್ನಿಸಿದರು. 'ಯಾಕೆ ಮಾಡಬಾರದು? ಬರೀ ಹೀರೊಗಳಿಗೆ ಮಾತ್ರ ಖರ್ಚು ಮಾಡಬೇಕಾ? ನಮಗೆ ಮೌಲ್ಯ ಇಲ್ಲವಾ?' ಎಂಬ ಪ್ರಶ್ನೆ ನನ್ನದು.

ಈಚೆಗೆ ನಡೆದ ಸಭೆಯಲ್ಲಿ ಇಷ್ಟೆಲ್ಲಾ ಹೇಳಿದ ತಕ್ಷಣ ನಿರ್ದೇಶಕರೊಬ್ಬರು ಎದ್ದು ಹೇಳಿದರು, 'ಇನ್ಮೇಲೆ ಹೆಣ್ಣುಮಕ್ಕಳನ್ನು ಹಾಕಿಕೊಳ್ಳದೆ ಸಿನಿಮಾ ಮಾಡುತ್ತೇವೆ' ಎಂದು. ನಮ್ಮ ಸಮಸ್ಯೆಯನ್ನು ವ್ಯಂಗ್ಯವಾಗಿ ನೋಡಿದರು.

ನಾವು ಒತ್ತಾಯಿಸುತ್ತಿರುವ ಸಮಿತಿಯ ರಚನೆ ಚಲನಚಿತ್ರ ವಾಣಿಜ್ಯ ಮಂಡಳಿ ವಿರುದ್ಧ ಅಂತ ಯಾಕೆ ಅಂದುಕೊಳ್ಳುತ್ತಿದ್ದಾರೆ? ಏನು ಹೇಳಿದರೂ ಅದನ್ನು ಸ್ವೀಕರಿಸುವ ಮನೋಭಾವವೇ ಇಲ್ಲವೇ? ಸಂವೇದನಾಶೀಲತೆ ಇಲ್ಲದವರಿಂದ ಏನು ನಿರೀಕ್ಷಿಸಬಹುದು? ಈಗ ಸಮಸ್ಯೆ ಹೇಳಿದರೆ, ಈ ಮೊದಲು ಯಾಕೆ ಮಾತನಾಡಿಲ್ಲ ಎಂದು ಕೇಳುತ್ತಾರೆ. ಹೇಳಿಕೊಳ್ಳುವ ಅವಕಾಶ ಸಿಕ್ಕಾಗೆಲ್ಲಾ ಹೇಳಿದ್ದೇನೆ.

ನಾವೊಂದು ಹೆಜ್ಜೆ ಇಟ್ಟಿದ್ದೇವೆ. ನಮಗೆ ಇದರ ಫಲ ಸಿಗುತ್ತೋ ಇಲ್ಲವೋ ಗೊತ್ತಿಲ್ಲ. ಖಂಡಿತ ಮುಂದಿನವರಿಗೆ ಇದು ಪ್ರಯೋಜನಕ್ಕೆ ಬರುತ್ತದೆ. ಒಂದು ರೀಚ್ ಆಗುತ್ತದೆ ಎನ್ನುವ ನಂಬಿಕೆಯಿದೆ. ■

## ಎಚ್ಚರಿಕೆಯ ನಡೆ

-ಪೂಜಾ ಗಾಂಧಿ, ನಟಿ



ಮಲೆಯಾಳಂನ ಹೇಮಾ ಸಮಿತಿ ಮಾದರಿಯಲ್ಲಿ ಕನ್ನಡ ಚಿತ್ರರಂಗದಲ್ಲಿಯೂ ಒಂದು ಸಮಿತಿ ರಚನೆಯಾಗಬೇಕು ಎಂಬುದು ನನ್ನ ಒತ್ತಾಯ ಕೂಡ.

ಯಾರ ಮೇಲೆ ದೌರ್ಜನ್ಯ ನಡೆಯುತ್ತದೆ, ನಡೆದಿಲ್ಲ ಎನ್ನುವುದು ಬೇರೆಯ ವಿಷಯ. ದೌರ್ಜನ್ಯ ಅನುಭವಿಸಿದವರಿಗೆ ಮಾತ್ರ ಅವರ ಪರಿಸ್ಥಿತಿ ಗೊತ್ತಿರುತ್ತೆ. ಹೀಗಾಗಿ ಇದಕ್ಕೆ ಸಂಬಂಧಪಟ್ಟ ಸಮಿತಿ ರಚನೆ ಆಗಬೇಕು. ಅದು ಸರ್ಕಾರದ ಸಹಭಾಗಿತ್ವದಲ್ಲಿಯೇ ರಚನೆಯಾಗಬೇಕು. ನಿರ್ದಿಷ್ಟ ನಿಯಮಗಳು ಬರಬೇಕು. ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ಈ ನಿರ್ಧಾರ ಕೈಗೊಳ್ಳಬೇಕು.

ಹೆಣ್ಣುಮಕ್ಕಳ ಸುರಕ್ಷತೆಯ ಬಗ್ಗೆ ಸಿನಿಮಾರಂಗ ಅಸಂಘಟಿತ ಎನಿಸುತ್ತದೆ. ಸರ್ಕಾರದ ಸಹಭಾಗಿತ್ವದಲ್ಲಿ ಸಮಿತಿ ರಚನೆ ಆದರೆ, ನ್ಯಾಯಮೂರ್ತಿಗಳು, ಐಪಿಎಸ್ ಅಧಿಕಾರಿಗಳು ಇದ್ದರೆ, ಖಂಡಿತ ಒಂದು ಎಚ್ಚರಿಕೆಯ ನಡೆ ಇರುತ್ತದೆ.




ನಾನು ಬೇರೆ ರಾಜ್ಯದಿಂದ ಬಂದು ಕನ್ನಡತಿಯಾಗಿದ್ದೇನೆ. ಇಲ್ಲಿ ಆ ಮಟ್ಟಕ್ಕೆ ಕಾಸ್ಟಿಂಗ್ ಕೌಚ್ ಸಮಸ್ಯೆಯನ್ನು ಕೇಳಿಲ್ಲ. ಆದರೆ ಸಂಭಾವನೆಯಲ್ಲಿನ ವ್ಯತ್ಯಾಸ ಅರಗಿಸಿಕೊಳ್ಳಲಾಗದ ವಿಷಯ. ಸುಮಾರು ಬಾರಿ ಈ ಬಗ್ಗೆ ಮಾತನಾಡಿದ್ದೇನೆ. ಸಿನಿಮಾ ಬೈಸಿಕಲ್ ಇದ್ದ ಹಾಗೆ. ಎಲ್ಲರೂ ಇಲ್ಲಿ ಮುಖ್ಯ. ಹೀಗಾಗಿ ಸಮಾನವಾಗಿ ಸಂಭಾವನೆ ನೀಡಬೇಕು ಎನ್ನುವುದು ನನ್ನ ವಾದ. ಕೆಲವು ಸಿನಿಮಾಗಳಲ್ಲಿ ಬಜೆಟ್ ಕಾರಣವಾಗಿ ಸೌಲಭ್ಯಗಳ ಕೊರತೆ ಇರುತ್ತದೆ ಎಂಬುದು ವಾಸ್ತವಿಕ ವಿಚಾರ. ಆದರೆ, ಮಹಿಳೆಯರಿಗೆ ಮೂಲಸೌಲಭ್ಯ ನೀಡಲೇಬೇಕು ಎಂಬುದು ನಮ್ಮ ಒತ್ತಾಯ. ಹೀರೊಯಿನ್‌ಗಳಿಗಿಂತ ಹೆಚ್ಚಾಗಿ ಜೂನಿಯರ್ ಕಲಾವಿದರಿಗೆ, ನೃತ್ಯಗಾರರಿಗೆ, ಇತರ ಮಹಿಳಾ ಸಿಬ್ಬಂದಿಗೆ ಈ ಮೂಲ ಸೌಲಭ್ಯಗಳು ಸಿಗಲೇಬೇಕು.

ಹಿಂದೆ ಆಗಿರುವುದು ಮುಗಿಯಿತು. ಅಲ್ಲಿಗೆ ಹೋಗಲು ಸಾಧ್ಯವಿಲ್ಲ. ಮುಂದೆ ಬರುತ್ತಿರುವ ಪ್ರತಿಭೆಗಳಿಗೆ ಎಲ್ಲ ಸರಿಯಾಗಿರುವಂತೆ ವ್ಯವಸ್ಥೆ ಮಾಡುವುದು ನಮ್ಮ ಕರ್ತವ್ಯ. ಜೊತೆಗೆ, ಹೆಣ್ಣುಮಕ್ಕಳು ಸ್ಟ್ರಾಂಗ್ ಆಗಿರಬೇಕು. ಇಲ್ಲಿಗೆ ಬರುವವರು ಶಾರ್ಟ್ ಕಟ್ ತಗೊಳ್ಳಲ್ಲ ಎಂದು ನಿರ್ಧರಿಸಬೇಕು. ■